ಇಂದು ದಿನಾಂಕಃ 11-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿಯ ಪರವಾಗಿಃ ಶ್ರೀ ಪಿ.ಎನ್.ಹೆಚ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿಃ ಶ್ರೀ ಎಸ್.ಯು.ಎ. ವಕೀಲರಿಂದ :**

**2.** ಗ್ರಾಮ ಪಂಚಾಯತ್ ಪಿ.ಡಿ.ಓ. ನನ್ನ ಮೇಲಾಧಿಕಾರಿ ಎಂದರೆ ಸರಿ . ಈ ಪ್ರಕರಣ ಯಾವ ರೀತಿಯ ಪ್ರಕರಣ ಯಾವುದಕ್ಕೆ ಸಂಬಂಧಪಟ್ಟಿದೆ ಎಂದು ನಿಮ್ಮ ಮೇಲಾಧಿಕಾರಿ ಹೇಳಿದ್ದಾರಾ ಎಂದರೆ ಸಾಕ್ಷಿ ನಾನು ಆ ಸಮಯದಲ್ಲಿ ಸದರಿ ಕಚೇರಿಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದೆ ಎಂದು ನುಡಿದಿರುತ್ತಾರೆ. ದಿನಾಂಕ 09-01-2021 ರಿಂದ 30-08-2025 ರ ವರೆಗೆ ನಾನು ಗೋಕರ್ಣ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಟೆಂಡರ್ ಕರೆದಿರುವುದು, ಹರಾಜು ಪ್ರಕ್ರಿಯೆಯ ಪ್ರಕಟಣೆ, ಹರಾಜು ಪ್ರಕ್ರಿಯೆ ಠರಾವು . ಪ್ರತಿವಾದಿಗೆ ಕೊಟ್ಟಿರುವ ನೋಟಿಸ್ ನೋಡಿರುತ್ತೇನೆ. ಈ ದಾಖಲಾತಿಗಳನ್ನು ನೋಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ತಯಾರಿಸಲು ಇದೇ ವಕೀಲರು ಎಂದು ಯಾರು ಹೇಳಿದರು ಎಂದರೆ ಸಾಕ್ಷಿ ಪ್ರಕರಣ ದಾಖಲಿಸುವಾಗ ನಾನೂ ಕೂಡ ವಕೀಲರ ಬಳಿ ಹೋಗಿದ್ದೆ ಎಂದು ನುಡಿದಿರುತ್ತಾರೆ.

**3.** ಟೆಂಡರ್ ಫಾರ್ಮ ಕೊಡುವುದು ಹಾಗೂ ಟೆಂಡರ್ ಓಪನ್ ಮಾಡಿ ಠರಾವು ಮಾಡುವುದು ಎಲ್ಲಾ ನಮ್ಮ ಪಂಚಾಯತಿಯವರೇ ಮಾಡಿರುತ್ತಾರೆ ಎಂದರೆ ಸರಿ . ನಮ್ಮ ಗ್ರಾಮ ಪಂಚಾಯತಿಯಲ್ಲಿ ವಾಹನ ಪಾರ್ಕಿಂಗ್ ಮಾಡಲು ರಶೀದಿಗಳನ್ನು ಪಂಚಾಯತಿಯಿಂದಲೇ ಕೊಡುತ್ತೇವೆ ಎಂದರೆ ಸರಿ. ಪ್ರತಿವಾದಿಯ ಟೆಂಡರ್ ಎಷ್ಟು ಹಣಕ್ಕೆ ಸ್ವೀಕರಿಸಲಾಗಿತ್ತು ಎಂದರೆ ಸಾಕ್ಷಿ ನಾವು ಟೆಂಡರ್ ಕರೆದಿರುವುದು ರೂ. 4,90,000-

ನಂತರ ಹರಾಜು ಪ್ರಕ್ರಿಯೆಯಲ್ಲಿ ರೂ. 8,32,000-00 ಕ್ಕೆ ನಿಗದಿಯಾಗಿತ್ತು. ಸಾಕ್ಷಿ ನಿಖರವಾದ ಮೊತ್ತವನ್ನು ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ಪ್ರತಿವಾದಿ ಫೆಬ್ರವರಿವರೆಗೆ ಮಾತ್ರ ಅಮೌಂಟ್‌ನ್ನು ತುಂಬಿರುತ್ತಾರೆ. ಅದರ ನಂತರ ಹಣ ತುಂಬಿರುವುದಿಲ್ಲ. ದಿನಾಂಕ 16-08-2022 ರಂದು ಷರತ್ತು ಉಲ್ಲಂಘನೆಯಾಗಿದೆ. ವಿಚಾರಣೆ ದಿನಾಂಕ 01-02-2022 ರಿಂದ 15-08-2022 ರವರೆಗೆ ನಡೆದಿದೆ. ಆ ಸಮಯದಲ್ಲಿ ಇರುವ ಪಂಚಾಯತಿ ಅಧಿಕಾರಿ ವಿನಯ್‌ಕುಮಾರ್ ಇವರ ಮುಂದೆ ವಿಚಾರಣೆ ನಡೆದಿರುತ್ತದೆ . ವಿಚಾರಣೆ ಎಷ್ಟು ಬಾರಿ ನಡೆದಿದೆ ಎಂದರೆ ಸಾಕ್ಷಿ ವಿಚಾರಣೆ ಎಂಬುದು ನಡೆದಿಲ್ಲ , ಪ್ರಥಮಬಾರಿ ಕರೆದು ಮನವರಿಕೆ ಮಾಡಿದ್ದೇವೆ, ಆದರೆ ಅವರು ಹಣ ಕಲೆಕ್ಷನ್ ಮಾಡುತ್ತಿದ್ದರು, ಆದರೆ ತುಂಬಲಿಲ್ಲ. ನಂತರ ಸಾಮಾನ್ಯ ಸಭೆಯ ಠರಾವು ನಂತರ ಕ್ರಮವನ್ನು ಕೈಗೊಂಡಿರುತ್ತೇವೆ. ಅವರು ಕಲೆಕ್ಷನ್ ಮಾಡುತ್ತಿದ್ದರು, ಆದರೆ ಹಣವನ್ನು ತುಂಬುತ್ತಿರಲಿಲ್ಲ, ಕಾರಣ ಅವರ ರಸಿಟ್ ಬುಕ್‌ನ್ನು ಸೀಜ್ ಮಾಡಿ ನಂತರ ದಿನಾಂಕ 17-08-2022 ರಿಂದ ನಾವು ಕಲೆಕ್ಷನ್ ಶುರು ಮಾಡಿದೆವು . ಷರತ್ತು ಉಲ್ಲಂಘನೆಯಾಗಿದೆ ಎಂದು ಹೇಳುವ ಬಗ್ಗೆ ವಾಹನದ ಮಾಲಿಕರಿಂದ ಯಾವುದಾದರೂ ಲಿಖಿತ ತಕರಾರು ಬಂದಿತ್ತಾ ಎಂದರೆ ಸಾಕ್ಷಿ ವಾಹನ ಮಾಲಿಕರ ಸಂಬಂಧ ಬರುವುದಿಲ್ಲ, ಅವರು ಷರತ್ತು ಉಲ್ಲಂಘನೆ ಮಾಡಿ ಹಣ ಕಟ್ಟಲಿಲ್ಲ ಎಂದು ನುಡಿದಿರುತ್ತಾರೆ . ನಮ್ಮ ಪ್ರಕಾರ ಪ್ರತಿವಾದಿ ಪ್ರತಿ ತಿಂಗಳು ರೂ . 1,32,000-00 ದ ಚಿಲ್ಲರೆ ತುಂಬಬೇಕಿತ್ತು. ಸಾಕ್ಷಿ ನಿ.ಪಿ.3 - ಕರಾರನ್ನು ನೋಡಿ ಗುರುತಿಸಿರುತ್ತಾರೆ. ನಿ.ಪಿ.4- ನಮ್ಮ ಟೆಂಡರ್ ಫಾರ್ಮ ಎಂದರೆ ಸರಿ . ಟೆಂಡರ್ ಹಣದ 1/6 ನ್ನು ತುಂಬಬೇಕು ಎಂದು ನಮ್ಮ ಕರಾರಿನಲ್ಲಿ ಇದೆ ಎಂದರೆ ಸರಿ. ಸದರಿ ಕರಾರಿನ 21 ನೇ ಷರತ್ತಿನ ಪ್ರಕಾರ ಪ್ರತಿ 11 ತಿಂಗಳಿಗೆ ಕರಾರನ್ನು ನವೀಕರಿಸಬೇಕು ಎಂದು ಇದೆ ಎಂದರೆ ಸರಿ . 11 ತಿಂಗಳ ನಂತರ ನಮ್ಮ ಗ್ರಾಮ ಪಂಚಾಯತಿಯಿಂದ ಸದರಿ ಕರಾರನ್ನು ನವೀಕರಣ ಮಾಡಿಕೊಟ್ಟಿದ್ದು ಇಲ್ಲ ಎಂದರೆ ಸರಿ . ಸಾಕ್ಷಿ ಅವರು 11 ತಿಂಗಳು ಮಾತ್ರ ಹಣ ಭರಣ ಮಾಡಿದ್ದಾರೆ , ಅದರ ನಂತರ ಹಣ ಭರಣ ಮಾಡಿಲ್ಲ ಎಂದು ನುಡಿದಿರುತ್ತಾರೆ.

ನಮ್ಮ ಗ್ರಾಮ ಪಂಚಾಯತಿದಲ್ಲಿ ನಮ್ಮ ಅನುಕೂಲಕರ ವ್ಯಕ್ತಿಗೆ ಟೆಂಡರನ್ನು ಕೊಡಬೇಕೆಂದು ಪ್ರತಿವಾದಿ ಷರತ್ತು ಉಲ್ಲಂಘನೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅಸಿಸ್ಟೆಂಟ್ ಕಮೀಶನರ್ ಪಂಚಾಯತ್ ರಾಜ್ ಎಕ್ಟನಲ್ಲಿ ನಮ್ಮ ಮೇಲಿನ ಅಧಿಕಾರಿಯಾಗಿರುತ್ತಾರೆ ಎಂದರೆ ಸರಿಯಲ್ಲ. ಕಾರ್ಯನಿರ್ವಾಹಕ ಅಧಿಕಾರಿ ನಮ್ಮ ಮೇಲಾಧಿಕಾರಿಯಾಗಿರುತ್ತಾರೆ . ಗ್ರಾಮ ಪಂಚಾಯತಿಯಲ್ಲಿ ಯಾವುದೇ ದಾಖಲಾತಿಯ ಬಗ್ಗೆ ವಿಚಾರಣೆ ಮಾಡಲು ಅಸಿಸ್ಟೆಂಟ್ ಕಮೀಶನರ್ ಅಧಿಕಾರ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

**( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.